“ಅಳಿಯಂದ್ರು ಹೀಗಾ ಮಾಡೋದು. ನಾವು ಯಾರಿಗಾದ್ರು ಮುಖ ತೋರಿಸುವುದಾದರೂ ಹೇಗೆ ಕಣೇ... ಊರೆಲ್ಲಾ ಇದೇ ಸುದ್ದಿ. ನಾವು ವಿಷ ತಗೊಂಡು ಸತ್ತೋಗುತ್ತೀವಿ” ಕುಮುದಿನಿಯ ಅಪ್ಪಅಮ್ಮನ ಬಿಕ್ಕಿ ಬಿಕ್ಕಿ ಅಳುವ ಧ್ವನಿ.

“ಅಯ್ಯೋ, ನಮ್ಮ ಹುಡುಗ ಪಶುವಿನ ಹಾಗಿದ್ದ. ಮಕ್ಕಳು ಅಂದ್ರೆ ಅವನಿಗೆ ಪ್ರಾಣ. ಈ ರಕ್ಕಸಿಯನ್ನು



ಮದುವೆಯಾಗಿದ್ದೇ ನರಭಕ್ಷಕ ಆಗಿಬಿಟ್ಟ. ಇದನ್ನೆಲ್ಲ ನಾವು ನೋಡಿ ನಾಚಿಗೆಗೆಡಬೇಕು, ಕರ್ಮ” ಅದು ಕುಮುದಿನಿಯ ಗಂಡನ ಅಣ್ಣಂದಿರ ಧ್ವನಿಯಿರಬೇಕು. ಎಲ್ಲರೂ ಶಾಪ ಹಾಕುವವರೇ. ಒಮ್ಮೆ ಉಸಿರು ನಿಂತು ಹೋಗಬಾರದೇ? ಕುಮುದಿನಿಗೆ ಇಹದ ಪರಿವೆಯೇ ಇರಲಿಲ್ಲ. ಕಾರನ್ನು ಹೊರಗೆ ನಿಲ್ಲಿಸಿ ಗೇಟು ತೆರೆದು ಒಳ ಬಂದ ಅವಳ ಗಂಡನಿಗೆ ಗಾಬರಿಯಾಯಿತು. “ಏ... ಏನಾಯ್ತೇ... ಇದೇನೂ ನೀನು ಇಲ್ಲಿ ಬಿದ್ದು ಹೊರಳಾಡುವುದು. ಯಾರಾದರೂ ನೋಡಿದರೆ ಹುಚ್ಚು ಅಂದುಕೊಂಡಾರು” ಕುಮುದಿನಿ ಗಂಡನ ಧ್ವನಿಗೆ ಮೆಲ್ಲ ಕಣ್ಣು ಬಿಟ್ಟು ನೋಡಿದಳು. ಅವನು ಯಾವ ಗಲಿಬಿಲಿಯಲ್ಲೂ ಇರಲಿಲ್ಲ. ಅವಳು ಸಾವರಿಸಿಕೊಂಡು ಒಮ್ಮೆಗೆ ಎದ್ದು ಅವನ ಹಿಂದೆ ಮುಂದೆ ನೋಡಿದಳು. ಮಗುವಿನ ಪತ್ತೆಯಿಲ್ಲ. ಎಲ್ಲಿಂದ ಬಂತೋ ಶಕ್ತಿ, ಒಮ್ಮೆಗೇ ಎದ್ದು ಬಂದು ಅವನ ಕಾಲರ್ ಗಟ್ಟಿಯಾಗಿ ಹಿಡಿದುಕೊಂಡಳು.

“ನೀವು ಎಂಥ ಮನುಷ್ಯ ಕಣ್ರೀ... ಆ ಎಳೆಗೂಸನ್ನ ಛೀ...” ಆತ ಗಲಿಬಿಲಿಗೊಂಡ.

“ಏನಾಯಿತೇ? ಯಾವ ಕೂಸು ಏನ್ಕತೆ” ಆತ ತಬ್ಬಿಬ್ಬಾದ. ಮೈಯೆಲ್ಲ ರಕ್ತದ ವಾಸನೆ. ಆತ ಒಳ ಹೋಗುವುದಕ್ಕೆ ಮುಂದಡಿಯಿಟ್ಟ. ಅವಳ ಸಿಟ್ಟು, ದುಃಖ ಹೆಚ್ಚುತ್ತಿತ್ತು. ಅವನ್ನು ತಡೆದು ನಿಲ್ಲಿಸಿದಳು.

“ಸುಶಾಂತ್ ಎಲ್ಲಿ? ಬೇಗ ಹೇಳಿ? ಏನು ಮಾಡಿದಿರಿ?” ಅವನು ಅವಳ ಕೈ ಬಿಡಿಸಿಕೊಂಡು ಅಸಹನೆಯಿಂದ ಹೇಳಿದ.

“ಅವನು ನನ್ನ ಜೊತೆ ಬಂದಿಲ್ಲ. ಹಾಗಂತ ಅವನ ಅಪ್ಪಅಮ್ಮನಿಗೂ ಹೇಳು ಅಂದಿದ್ದೆ, ಅಲ್ವಾ? ಅದೊಂದು ದೊಡ್ಡ ಕಥೆ. ಯಾರಾದರೂ ನೋಡುವ ಮೊದಲು ಈ ರಕ್ತದ ಹಸಿವಾಸನೆಯಿಂದ ನಾರುವ ಬಟ್ಟೆ ತೆಗೆದು ಸ್ನಾನ ಮಾಡಿ ಬರುತ್ತೇನೆ. ಆಮೇಲೆ ಎಲ್ಲಾ ಹೇಳುತ್ತೇನೆ” ಆತ ಅವಳನ್ನು ತಳ್ಳಿ ಮನೆಯ ಒಳಗೆ ಹೋಗಲು ಪ್ರಯತ್ನಿಸಿದ ಅವಳು ಅವನನ್ನು ರೋಷದಿಂದ ನೋಡಿದಳು. “ನೀವು ಈ ಮಟ್ಟಕ್ಕೆ ಇಳಿತೀರಿ ಅಂತ ನಾನು ಕನಸಲ್ಲೂ ಅಂದುಕೊಂಡಿರಲಿಲ್ಲ. ಹಾಗಾದ್ರೆ ನಾನು ಕೇಳಿದ್ದು, ಅಂದುಕೊಂಡಿದ್ದು ನಿಜನಾ? ಯಾಕ್ರೀ... ಹೀಗೆ ಮಾಡಿದ್ರಿ?” ಅವಳು ಅವನ ಕಾಲ ಬುಡದಲ್ಲಿ ಕುಸಿದು ಕುಳಿತಳು. ಈಗ ಅವನು ನಿಜಕ್ಕೂ ಗಾಬರಿಗೊಂಡ. ಏನೋ ಸಂಭವಿಸಿದೆ ಎನ್ನುವ ಅಚ್ಚರಿಯಿಂದ ಅವಳನ್ನು ಗಟ್ಟಿಯಾಗಿ ಹಿಡಿದುಕೊಂಡ.

“ಏನಾಯ್ತು ಕುಮುದಿನಿ? ನಾನು ಏನು ಮಾಡಿದೆ! ಬೇಗ ಹೋಗಿ ಬರುತ್ತೇನೆ ಎಂದು ಇಲ್ಲಿಂದ ಒಳರಸ್ತೆಯಲ್ಲಿ ಸುಶಾಂತನನ್ನು ಕರೆದುಕೊಂಡು ಹೋದೆ. ನನ್ನ ಗ್ರಹಚಾರಕ್ಕೆ ಹೊಂಡ ತಪ್ಪಿಸಲು